ಕಾನೂನಿನ ನಡಿಗೆ ಮಹಿಳೆಯರ ಕಡೆಗೆ
DEEDS Since 1982

# DEEDS ಸಂವಾದ
ಸಮತೆಯ ಸಮಾಜದೆಡೆಗೆ

ಸಂವಾದ 5

ಖಾಸಗಿ ಪ್ರಸಾರಕ್ಕಾಗಿ ಮಾತ್ರ

## ನಿರ್ದೇಶಕರ ಮಾತು

ಡೀಡ್ಸ್‌ಗೆ 40ರ ಸಂಭ್ರಮ. ಈ ವರುಷಗಳಲ್ಲಿ ಸಂಸ್ಥೆಯು ಹಲವಾರು ಏಳು ಬೀಳುಗಳನ್ನು ಕಂಡಿದೆ. ಸಮಾಜ ಬದಲಾವಣೆಯ ಹೊಸ ಹಾದಿಯಲ್ಲಿ ನಮ್ಮ ಜೊತೆ ಸಾಗುತ್ತಿರುವ ತಮ್ಮೆಲ್ಲರಿಗೂ ಹೃದಯ ಪೂರ್ವಕವಾದ ಧನ್ಯವಾದಗಳು.

ಡೀಡ್ಸ್‌ನ ಘೋಷವಾಕ್ಯ ಕಾನೂನಿನ ನಡಿಗೆ ಮಹಿಳೆಯರ ಕಡೆಗೆಯಂತೆ ಜ್ಞಾನವನ್ನು ಸರಳವಾಗಿ ಮಹಿಳೆಯರಿಗೆ ನೀಡುವ ಕಾರ್ಯ ಚಟುವಟಿಕೆಯ ಮೂಲಕ ಈಗಾಗಲೇ ಉತ್ತರಕನ್ನಡ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಲಿಂಗತ್ವ, ಮಹಿಳಾ ಕಾನೂನು ಹಾಗೂ ಮಹಿಳಾ ಪ್ರಕರಣ ನಿರ್ವಹಣೆಗೆ ಸಂಬಂಧಿಸಿ ಮೂರು ಹಂತದ ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದೇವೆ. ಸುಮಾರು 50 ಜನ ತರಬೇತಿಗೊಂಡ ಪೂರಕ ಕಾನೂನು ಸುಗಮಕಾರರು ಸುಮಾರು 300 ಕಾರ್ಯಕ್ರಮಗಳನ್ನು ನಡೆಸುವುದರ ಮೂಲಕ 6000 ತಳಮಟ್ಟದ ಮಹಿಳೆಯರನ್ನು ತಲುಪಿದ್ದೇವೆ ಮತ್ತು 2021-22 ರ ಸಾಲಿನಲ್ಲಿ ಬಳ್ಳಾರಿ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಪ್ರಚಾರಾಂದೋಲನದ ಮಾಹಿತಿ ಸಾಮಗ್ರಿಗಳನ್ನು ಸುಮಾರು 7000 ಮನೆಗಳಿಗೆ ಹಂಚಿರುತ್ತಾರೆ. ಎರಡೂ ಜಿಲ್ಲೆಯ ಪೂರಕ ಕಾನೂನು ಸುಗಮಕಾರರು ಫೆಬ್ರವರಿ ತಿಂಗಳಲ್ಲಿ ನಡೆಯುವ ಕೊನೆಯ ಹಂತದ ತರಬೇತಿಯನ್ನು ಪಡೆಯಲು ಹುಮ್ಮಸ್ಸಿನಲ್ಲಿದ್ದಾರೆ.

ಡೀಡ್ಸ್ ಸಂಸ್ಥೆಯು ಹೆಚ್ಚುತ್ತಿರುವ ಮಹಿಳಾ ಪ್ರಕರಣಗಳನ್ನು ಗಮನದಲ್ಲಿಟ್ಟುಕೊಂಡು ತನ್ನ ಪ್ರಯತ್ನವನ್ನು ದ್ವಿಗುಣಗೊಳಿಸಿದೆ. ಕಳೆದ 6 ತಿಂಗಳಲ್ಲಿ ಕರ್ನಾಟಕದ ಒಟ್ಟು 8 ಜಿಲ್ಲೆಗಳಾದ ದಕ್ಷಿಣ ಕನ್ನಡ, ಕೊಪ್ಪಳ, ಗದಗ, ಚಿತ್ರದುರ್ಗ, ಧಾರವಾಡ, ಉತ್ತರ ಕನ್ನಡ, ಬಾಗಲಕೋಟೆ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಸರಿ ಸಮಾರು 154 ಜನ ಪೂರಕ ಕಾನೂನು ಸುಗಮಕಾರರು ಹಿಂಸೆಯ ವಿರುದ್ಧ ಹೋರಾಡುವ ಸಂತ್ರಸ್ಥರಿಗೆ ಬೆಂಬಲ ಹಾಗೂ ಸಹಕಾರ ನೀಡಲು ತಮ್ಮನ್ನು ತಾವು ತೊಡಗಿಸಿಗೊಂಡಿದ್ದಾರೆ ಮತ್ತು ತಳಮಟ್ಟದಲ್ಲಿ ಲಿಂಗ ಸಮಾನತೆ, ಕೌಟುಂಬಿಕ ದೌರ್ಜನ್ಯ, ಪೋಕ್ಸೋ, ಬಾಲ್ಯವಿವಾಹದಂತಹ ಕಾನೂನುಗಳ ಮಾಹಿತಿಯನ್ನು 198 ಮತ್ತು KHPT ಸಂಯೋಗದೊಂದಿಗೆ 180 ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಮಹಿಳೆಯರು, ಪುರುಷರು ಮತ್ತು ಹದಿಹರೆಯದ ಮಕ್ಕಳು ಸೇರಿ ಒಟ್ಟು 9450 ಜನಕ್ಕೆ ಮಾಹಿತಿ ತಲುಪಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಎಂಟು ಜಿಲ್ಲೆಗಳ ಪೂರಕ ಕಾನೂನು ಸುಗಮಕಾರರು ತರಬೇತಿದಾರರಾಗಿ ಸಂಘ ಸಂಸ್ಥೆಗಳಲ್ಲಿ, ಕಾನೂನು ಸೇವಾ ಪ್ರಾಧಿಕಾರಗಳೊಂದಿಗೆ ಸೇರಿ ಮಾಹಿತಿಯನ್ನು ನೀಡುತ್ತಿದ್ದಾರೆ. ಜೊತೆಗೆ ಮಹಿಳಾ ಪ್ರಕರಣಗಳನ್ನು ಪೋಲಿಸ್ ಠಾಣೆ, ಸಾಂತ್ವನ, ಸಖಿ, ನ್ಯಾಯಾಲಯಗಳಿಗೆ ನೀಡಲು ಬೆಂಬಲ ಮತ್ತು ಮಾರ್ಗದರ್ಶನ ನೀಡುತ್ತಿದ್ದಾರೆ. ಧಾರವಾಡ ಜಿಲ್ಲೆಯಲ್ಲಿ ಲಾಕ್‌ಡೌನ್ ಸಮಯದಲ್ಲಿ 4 ಬಾಲ್ಯವಿವಾಹ ತಡೆದು ಹೆಣ್ಮಕ್ಕಳ ಮೊಗದಲ್ಲಿ ನಗು ಮೂಡುವಂತೆ ಮಾಡಿದ್ದಾರೆ. ತಮ್ಮ ಪ್ರದೇಶದಲ್ಲಿ ಮಹಿಳೆಯರಿಗೆ ಕೌಟುಂಬಿಕ ದೌರ್ಜನ್ಯವಾದಾಗ ಕಾನೂನು ನೆರವನ್ನು ಉಚಿತವಾಗಿ ಸಿಗುವಂತೆ ಮಾಡಲು ಶ್ರಮಿಸಿದ್ದಾರೆ.

ಕಾನೂನಿನ ತಿಳುವಳಿಕೆಯನ್ನು ಎಲ್ಲೆಡೆ ಬಿತ್ತುವ, ಅನ್ಯಾಯ ಹಿಂಸೆ ಆದಾಗ ಅವರ ವಿರುದ್ಧ ಧ್ವನಿ ಎತ್ತುವ ಮತ್ತು ಅನ್ಯಾಯ ತಡೆಯಲು ಸರಕಾರಿ ವ್ಯವಸ್ಥೆಗಳ ಸದುಪಯೋಗ ಪಡೆಯುವುದನ್ನು ಮತ್ತು ನೊಂದ ಮಹಿಳೆಯರು ಪಡೆಯುವಂತೆ ಮಾಡಲು ನಮ್ಮ ಸುಗಮಕಾರರು, ಅವರ ಜಿಲ್ಲಾ ಸಮುಚ್ಚಯಗಳು, ತಳಮಟ್ಟದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಮಹಿಳೆಯರು, ಕಾನೂನಿನ ನಡೆಗೆಯೊಟ್ಟಿಗೆ ಭಾಗಿಯಾದ ಎಲ್ಲ ಸ್ವಸಹಾಯ ಸಂಘಗಳು, ಸಂಘ ಸಂಸ್ಥೆಗಳು, ನಾಗರಿಕರು ಇದನ್ನು ಮುಂದುವರಿಸಬೇಕೆನ್ನುವುದು ನಮ್ಮ ಆಶಯ. ಅದು ನಮ್ಮೆಲ್ಲರಿಂದ ಈಡೇರಲಿ.

**ಮರ್ಲಿನ್ ಮಾರ್ಟಿಸ್**

## ಮದುವೆಯ ವಯಸ್ಸು ಹದಿನೆಂಟೋ? ಇಪ್ಪತ್ತೊಂದೋ??....

ದೇಶದಲ್ಲಿ ಹೆಚ್ಚಳವಾಗುತ್ತಿರುವ ಬಾಲ್ಯವಿವಾಹಗಳನ್ನು ತಡೆಯಲು ಕೇಂದ್ರ ಸರಕಾರ ಚಳಿಗಾಲದ ಅಧಿವೇಶನದಲ್ಲಿ ಬಾಲ್ಯವಿವಾಹ ನಿಷೇಧ ಕಾಯ್ದೆ. 2006ಕ್ಕೆ ತಿದ್ದುಪಡಿ ತರಲು ಮುಂದಾಗಿತ್ತು. ಈ ಮೂಲಕ ಮಹಿಳೆಯರ ವಿವಾಹದ ವಯಸ್ಸನ್ನು ಕಾನೂನಾತ್ಮಕವಾಗಿ ಕನಿಷ್ಠ 18 ರಿಂದ 21 ವರ್ಷಕ್ಕೆ ಹೆಚ್ಚಿಸುವ ಪ್ರಸ್ತಾಪವನ್ನು ಮುಂದಿಟ್ಟಿದೆ.

2020ರಲ್ಲಿ ಜಯಾಜೇಟ್ಲಿ ಸಮಿತಿಯ ವರದಿ ಪ್ರಕಾರ ಜಗತ್ತಿನ ಎಲ್ಲ ದೇಶಗಳಿಗಿಂತಲೂ ಭಾರತದಲ್ಲಿ ತಾಯಂದಿರ ಅಪೌಷ್ಠಿಕತೆಯ ಪ್ರಮಾಣ ಹೆಚ್ಚಾಗಿದೆ. ಇದರಿಂದ ತಾಯಂದಿರ ಮತ್ತು ಶಿಶು ಮರಣದ ದರ ಹೆಚ್ಚಾಗುವುದಕ್ಕೆ ಬಡತನ ಹಾಗೂ ಅಪೌಷ್ಠಿಕತೆಗಳ ಜೊತೆಗೆ ಮಹಿಳೆಯರಿಗೆ ಅವಕಾಶಗಳು ಸಿಗದೇ ಇರುವುದು ಕಾರಣ ಎಂದು ವರದಿ ಮಾಡಿತು. ಈ ಕಾರಣವಾಗಿ ಮದುವೆಯ ವಯಸ್ಸು 21 ಸೂಕ್ತ. ಯಾಕೆಂದರೆ ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆ ಈ ಅವಧಿಯಲ್ಲಿ ಆಗಿರುತ್ತದೆ ಮತ್ತು ಜವಾಬ್ದಾರಿ ಹೊರಲು ಸಿದ್ಧರಾಗಿರುತ್ತಾರೆ. ಡಿಗ್ರಿ ಶಿಕ್ಷಣ ಮುಗಿಸಲು ಸಾಧ್ಯವಾಗುತ್ತದೆ. 21 ರ ನಂತರ ಗರ್ಭಧರಿಸಲು ಇದು ಸೂಕ್ತ ಸಮಯ. ಇದರಿಂದ ತಾಯಿ ಮತ್ತು ಶಿಶು ಮರಣ ಕಡಿಮೆಯಾಗುತ್ತದೆ. ಇದರಿಂದ ಬಾಲ್ಯವಿವಾಹ ತಡೆಗಟ್ಟಬಹುದು ಎಂಬುವುದು ಪರವಾದ ವಾದ.

ಉತ್ತರ ಕರ್ನಾಟಕ, ಉತ್ತರ ಭಾರತದ ಅನೇಕ ಕಡೆ ಇನ್ನೂ ಕೂಡ ಬಾಲ್ಯ ವಿವಾಹಗಳು ಎಗ್ಗಿಲ್ಲದೆ ನಡೆಯುತ್ತಿವೆ. ಕಳೆದ ಲಾಕ್‌ಡೌನ್

ಸಮಯದಲ್ಲಿ ವಿವಾಹಗಳು ಹೆಚ್ಚಾದ ಬಗ್ಗೆ ದಾಖಲೆಗಳಿವೆ. ಸರಕಾರ ಹೊಸ ನಿಯಮಗಳನ್ನು ಜಾರಿಗೆ ತರುವ ಮೊದಲು ಹಿಂದಿನಿಂದ ನಡೆದುಕೊಂಡು ಬಂದಿರುವ ಬಾಲ್ಯವಿವಾಹದಂತಹ ಅನಿಷ್ಠ ಪದ್ಧತಿಗಳಿಗೆ ಕಡಿವಾಣ ಹಾಕಬೇಕು. ಬಲವಂತದಿಂದ ಬಾಲ್ಯವಿವಾಹ ನಡೆಸುತ್ತಿರುವ ಹೆತ್ತವರಿಗೆ ಮತ್ತು ಪ್ರೋತ್ಸಾಹ ನೀಡುವವರಿಗೆ ಕಠಿಣ ಶಿಕ್ಷೆ ನೀಡಬೇಕು. ಹೆಣ್ಣು ಮಕ್ಕಳಿಗೆ ಉಚಿತ ಶಿಕ್ಷಣ, ಶೌಚಾಲಯದ ವ್ಯವಸ್ಥೆ ಹಾಗೂ ಶಾಲೆಗಳಿಂದ ವಂಚಿತರಾದ ಹೆಣ್ಣುಮಕ್ಕಳಿಗೆ ಒಳ್ಳೆಯ ಯೋಜನೆಗಳನ್ನು ಕಾರ್ಯ ರೂಪಕ್ಕೆ ತರಬೇಕು. ಈ ಎಲ್ಲಾ ಕಾರ್ಯಗಳಲ್ಲಿ ಸಫಲತೆ ಕಂಡುಕೊಂಡ ಮೇಲೆ ಹೆಣ್ಣು ಮಕ್ಕಳ ಮದುವೆ ವಯಸ್ಸನ್ನು 21 ಕ್ಕೆ ಏರಿಸಬಹುದು. ಹೆಣ್ಣು ಮಕ್ಕಳಿಗೆ ಶಿಕ್ಷಣ ಪೂರೈಸಲು ಅವಕಾಶ ಕಲ್ಪಿಸಿಕೊಟ್ಟು, ಆರ್ಥಿಕ ಸ್ವಾವಲಂಬನೆ ಬಗ್ಗೆ ಅವಕಾಶಗಳನ್ನು ನೀಡಿದರೆ ಮಾತ್ರ ಸಮಾಜ ಅಭಿವೃದ್ಧಿ ಹೊಂದುವುದರಲ್ಲಿ ಯಾವುದೇ ಸಂದೇಹವಿಲ್ಲ.

ಕೇವಲ ಕಾನೂನು ತರುವುದರಿಂದ ಮಾತ್ರ ಸಮಾಜದಲ್ಲಿ ಸುಧಾರಣೆಯಾಗುವುದಿಲ್ಲ. ಮೊದಲಿಗೆ ಸಮಾಜದ ವಾಸ್ತವಿಕಾಂಶಗಳ ಬಗ್ಗೆ ಅಧ್ಯಯನ ನಡೆಸಬೇಕಾಗಿದೆ. ಮಹಿಳೆಯರ ರಕ್ಷಣೆ, ಆರೋಗ್ಯ, ವಿದ್ಯಾಭ್ಯಾಸ ಮಾನಸಿಕ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕಾಗಿದೆ.

## ಮಾನಸಿಕ ಆರೋಗ್ಯ ಆರೈಕೆ ಕಾಯ್ದೆ 2017 ಕಾರ್ಯಾಗಾರ




ಡಿಸೆಂಬರ್ ತಿಂಗಳ 18, 2021ರಂದು ಮಾನಸಿಕ ಆರೋಗ್ಯ ಆರೈಕೆ ಕಾಯ್ದೆ 2017ಕ್ಕೆ ಸಂಬಂಧಿಸಿದ ಅರಿವು ಕಾರ್ಯಕ್ರಮವನ್ನು ಡೀಡ್ಸ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಮಾನಸಿಕ ವಿಭಾಗ) ದಕ್ಷಿಣ ಕನ್ನಡ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮಂಗಳೂರು ಇವರ ಸಹಯೋಗದಲ್ಲಿ ನಡೆಯಿತು.

ಕಾರ್ಯಕ್ರಮವನ್ನು ಮಾನಸಿಕ ಆರೋಗ್ಯ ಮಾನವ ಹಕ್ಕು ಪುಸ್ತಕ ಬಿಡುಗಡೆಯ ಮೂಲಕ ಉದ್ಘಾಟಿಸಲಾಯಿತು. ಕಾರ್ಯಕ್ರಮದಲ್ಲಿ ಮಾನಸಿಕ ಆರೋಗ್ಯದ ಪರಿಕಲ್ಪನೆ ಬಗ್ಗೆ ಡಾ॥ ಶ್ರೀನಿವಾಸ ಭಟ್, ಮುಖ್ಯಸ್ಥರು, ಮಾನಸಿಕ ಅಧ್ಯಯನ ವಿಭಾಗ, ಕೆ.ಎಸ್ ಹೆಗ್ಡೆ, ಮೆಡಿಕಲ್ ಕಾಲೇಜು, ಮಂಗಳೂರು, ಮಾನಸಿಕ ಆರೋಗ್ಯ ಆರೈಕೆ ಕಾಯ್ದೆ–2017 ವಿಷಯದ ಕುರಿತು ಡಾ॥ ಅನಿರುದ್ಧ ಶೆಟ್ಟಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಮಾನಸಿಕ ವಿಭಾಗ) ದಕ್ಷಿಣ ಕನ್ನಡ ಜಿಲ್ಲೆ, ಮಾನಸಿಕ ಒತ್ತಡ ಮತ್ತು ಮಹಿಳೆ ವಿಷಯದ ಕುರಿತು ಡಾ॥ ಮರಿಯಾಲ್ಲ ಡಿಸೋಜ, ಉಪನ್ಯಾಸಕರು, ಮಾನಸಿಕ ವಿಭಾಗ, ಕಸ್ತೂರಿ ಬಾ ಮೇಡಿಕಲ್ ಕಾಲೇಜು, ಮಂಗಳೂರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದರು. ಮರ್ಲಿನ್ ಮಾರ್ಟಿಸ್ ನಿರ್ದೇಶಕಿ, ಡೀಡ್ಸ್ ಸಂಸ್ಥೆ, ಮಂಗಳೂರು ಪ್ರಾಸ್ತಾವಿಕ ಭಾಷಣ ಮಾಡಿದರು. ಕಾರ್ಯಕ್ರಮದ ಸಂಯೋಜಕರಾದ ಡಾ॥ ಶೋಭಾದೇವಿ, ಆಶಾ ಕಾರ್ಯಕರ್ತೆಯರ ಮೇಲ್ವಿಚಾರಕಿ ಶ್ರೀಮತಿ ಗಾಯತ್ರಿ ಶೆಟ್ಟಿ, ಡಾ॥ ರಾಜೇಶ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ,



ದಕ್ಷಿಣ ಕನ್ನಡ ಉಪಸ್ಥಿತರಿದ್ದರು. ತುಕಾರಾಮ ಎಕ್ಕಾರು ಸ್ವಾಗತಿಸಿದರು. ಖುಶಿ ದೇಸಾಯಿ ಧನ್ಯವಾದವಿತ್ತರು. ಜೆಸಿಂತ ಪಿರೇರಾ ಕಾರ್ಯಕ್ರಮ ನಿರೂಪಣೆ ಮಾಡಿದರು. ಕಾರ್ಯಾಗಾರದಲ್ಲಿ ಒಟ್ಟಾಗಿ 75 ಮಂದಿ ಭಾಗವಹಿಸಿದ್ದರು.

## ಸಮಾಲೋಚನಾ ಕಾರ್ಯಕ್ರಮ



ದಿನಾಂಕ 15–12–2021 ರಂದು ಡೀಡ್ಸ್ ಸಂಸ್ಥೆಯು ಮಂಗಳೂರಿನ ಸಿ.ಒ.ಡಿ.ಪಿ ಸಭಾಂಗಣದಲ್ಲಿ ಮಹಿಳೆಯರ ಪ್ರಕರಣಗಳನ್ನು ನಿರ್ವಹಿಸಿರುವ ಸಂಸ್ಥೆಗಳೊಂದಿಗೆ ಸಮಾಲೋಚನಾ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಕಾರ್ಯಕ್ರಮದಲ್ಲಿ ಸಖಿ, ಸ್ವಾಧಾರ, ಸಾಂತ್ವನ, ಮಕ್ಕಳ ಸಹಾಯವಾಣಿ, ಹಿರಿಯ ನಾಗರಿಕರ ಸಹಾಯವಾಣಿ ಹಾಗೂ ಇತರೆ ಸಂಘ–ಸಂಸ್ಥೆಗಳ 30 ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು. ಸದಸ್ಯರು ತಮ್ಮ ತಮ್ಮ ಕಾರ್ಯಕ್ಷೇತ್ರದಲ್ಲಿ ಎದುರಿಸುತ್ತಿರುವ ಸವಾಲುಗಳು ಮತ್ತು ಕೊರತೆಗಳನ್ನು ಕಾರ್ಯಕ್ರಮದಲ್ಲಿ ಹಂಚಿಕೊಂಡರು. ಮಹಿಳೆಯರನ್ನು ಸಬಲೀಕರಣಗೊಳಿಸಲು, ಸದೃಢಗೊಳಿಸಲು ಕೆಲವೊಂದು ಶಿಫಾರಸ್ಸುಗಳನ್ನು ಮಾಡಲಾಯಿತು.

# ಪೂರಕ ಕಾನೂನು ತರಬೇತಿ ಕಾರ್ಯಕ್ರಮ

**ಬಳ್ಳಾರಿ ಜಿಲ್ಲೆ**

ಪೂರಕ ಕಾನೂನು ಸುಗಮಕಾರರಿಗೆ ಮೊದಲ ಹಂತದ ಲಿಂಗತ್ವ ಬಗೆಗಿನ ತರಬೇತಿಯು ಅಕ್ಟೋಬರ್ ತಿಂಗಳ 29ರಿಂದ 30 ಮತ್ತು




ನವೆಂಬರ್ ತಿಂಗಳ 16ರಿಂದ 17ರಂದು ಬಳ್ಳಾರಿಯ ಫಾಮಿಲಿಯ ಅಸೋಸಿಯೇಶನ್ ಸಭಾಂಗಣದಲ್ಲಿ ನಡೆಯಿತು.

ಆರಂಭಿಕ ಉದ್ಘಾಟನಾ ಕಾರ್ಯಕ್ರಮದಲ್ಲಿ ಎಸ್.ಎಚ್. ಪುಷ್ಪಾಂಜಲಿದೇವಿ–ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಎಂ. ಡಾ. ಪವಿತ್ರ – ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯರು ಕಾರ್ಯದರ್ಶಿ ಡಾ. ಕಲಾವತಿ ಜಿ – ಉಪನ್ಯಾಸಕಿ, ದುರ್ಗಮ್ಮ – ಉಪಾಧ್ಯಕ್ಷೆ ವಿಮುಕ್ತಿ, ತರಬೇತಿಯಲ್ಲಿ 38 ಸುಗಮಕಾರರು ಭಾಗವಹಿಸಿದ್ದರು. ಲಿಂಗ ಲಿಂಗತ್ವ, ಲಿಂಗತ್ವದ ಸಾಮಾಜೀಕರಣ, ಲಿಂಗ ಸೂಕ್ಷ್ಮತೆ, ಸುಗಮಗಾರಿಕೆ, ತಳಮಟ್ಟದ ಮಾಹಿತಿ ಕಾರ್ಯಕ್ರಮದ ಪ್ರಾತ್ಯಕ್ಷಿಕೆ – ಯೋಜನೆ ವಿಷಯಗಳ ಮಾಹಿತಿ ನೀಡಲಾಯಿತು.

ಎರಡನೆಯ ಹಂತದ ಮಹಿಳಾ ಕಾನೂನು ಬಗೆಗಿನ ತರಬೇತಿಯು ಡಿಸೆಂಬರ್ ತಿಂಗಳ 22, 23, 24ರಂದು ನಡೆಯಿತು. 41 ಸುಗಮಕಾರರು ಭಾಗವಹಿಸಿದ್ದರು. ತಳಮಟ್ಟದ ಮಾಹಿತಿ ಕಾರ್ಯಕ್ರಮಗಳ ಅನುಭವ ಹಂಚಿಕೆ, ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ, ಬಾಲ್ಯವಿವಾಹ ನಿಷೇಧ ಕಾಯ್ದೆ, ಪೋಕ್ಸೊ, ಆಸ್ತಿಹಕ್ಕು, ನ್ಯಾಯಾಲಯದಲ್ಲಿ ನಡೆಯುವ ಪ್ರಕರಣಗಳ ವಿಚಾರಣೆಯ ವೀಕ್ಷಣೆ, ತಳಮಟ್ಟದ ಮಾಹಿತಿ ಕಾರ್ಯಕ್ರಮದ ಮಾಹಿತಿ ಮತ್ತು ಯೋಜನೆ ಮುಂತಾದ ವಿಷಯಗಳ ಮಾಹಿತಿ ನೀಡಲಾಯಿತು. ಮರ್ಲಿನ್ ಮಾರ್ಟಿಸ್, ಸೇವಾ ಪ್ರಾಧಿಕಾರದ ವಕೀಲರಾದ ಶಿವಲೀಲಾ, ತ್ರಿವೇಣಿ ಪತ್ತಾರ್, ರೇಣುಕಾ ರೆಡ್ಡಿ, ಪುಷ್ಪಲತಾ ಸಂಪನ್ಮೂಲ ವ್ಯಕ್ತಿಗಳಾಗಿದ್ದರು.

**ಬಾಗಲಕೋಟೆ ಜಿಲ್ಲೆ**

ಪೂರಕ ಕಾನೂನು ಸುಗಮಕಾರರಿಗೆ ಮೊದಲ ಹಂತದ ಲಿಂಗತ್ವ ಬಗೆಗಿನ ತರಬೇತಿಯು ನವೆಂಬರ್ ತಿಂಗಳ 20, 21 ಮತ್ತು 26, 27ರಂದು ಬಾಗಲಕೋಟೆಯ ಅಕ್ಷಯ ಸಭಾಂಗಣದಲ್ಲಿ ನಡೆಯಿತು.



ಆರಂಭಿಕ ಉದ್ಘಾಟನಾ ಕಾರ್ಯಕ್ರಮದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹೇಮಲತಾ ಮಲ್ಲೂರು ಉಪಸ್ಥಿತರಿದ್ದರು. ತರಬೇತಿಯಲ್ಲಿ 25 ಸುಗಮಕಾರರು ಭಾಗವಹಿಸಿದ್ದರು. ಲಿಂಗಲಿಂಗತ್ವ, ಲಿಂಗತ್ವದ ಸಾಮಾಜೀಕರಣ, ಲಿಂಗಸೂಕ್ಷ್ಮತೆ, ಸುಗಮಗಾರಿಕೆ, ತಳಮಟ್ಟದ ಮಾಹಿತಿ ಕಾರ್ಯಕ್ರಮದ ಪ್ರಾತ್ಯಕ್ಷಿಕೆ ಯೋಜನೆ ವಿಷಯಗಳ ಮಾಹಿತಿ ನೀಡಲಾಯಿತು.

**ಉತ್ತರ ಕನ್ನಡ ಜಿಲ್ಲೆ**

ಪೂರಕ ಕಾನೂನು ಸುಗಮಕಾರರ ಮತ್ತು ತಳಮಟ್ಟದ ಮಾಹಿತಿ ಕಾರ್ಯಕ್ರಮಗಳ ಭಾಗಾರ್ಥಿಗಳ ಸಮಾವೇಶವು ಡಿಸೆಂಬರ್ 12ರಂದು ಹೊನ್ನಾವರದ ದಿ ಸೋಶಿಯಲ್ ಕ್ಲಬ್‌ನಲ್ಲಿ ನಡೆಯಿತು. ಉದ್ಘಾಟನಾ ಕಾರ್ಯಕ್ರಮದಲ್ಲಿ ಪಟ್ಟಣ ಪಂಚಾಯತ್ ಅಧ್ಯಕ್ಷ ಶಿವರಾಜ್ ಮೇಸ್ತ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ವಿರೂಪಾಕ್ಷ ಪಾಟೀಲ್, ಮೇಲ್ವಿಚಾರಕ ಹೀರಾಬಾಯಿಜಾದ್ರಿ, ಮುಗ್ವಾಚರ್ಚ್ ಫಾದರ್ ಸೆಬೆಸ್ಟಿಯನ್ ಫೆರ್ನಾಂಡಿಸ್ ಉಪಸ್ಥಿತರಿದ್ದರು. ಆಯ್ದ ಸುಗಮಕಾರರು, ತಳಮಟ್ಟದ ಕಾರ್ಯಕ್ರಮದ ಭಾಗಾರ್ಥಿಗಳು ತರಬೇತಿಯಿಂದಾದ ಪ್ರಯೋಜನಗಳು, ತಾವು ಮಾಡಿಕೊಂಡ ಬದಲಾವಣೆಗಳನ್ನು ಹಂಚಿಕೊಂಡರು. 12 ಸುಗಮಕಾರರು 28 ತಳಮಟ್ಟದ ಕಾರ್ಯಕ್ರಮದ ಭಾಗಾರ್ಥಿಗಳು ಭಾಗವಹಿಸಿದ್ದರು.




# ರಾಜ್ಯ ಮಟ್ಟದ ಸುಗಮಕಾರರ ಸಮುಚ್ಚಯದ ಚಟುವಟಿಕೆ

ದಿನಾಂಕ 4-12-2021 ರಂದು ಡಾನ್ ಬಾಸ್ಕೋ ಅಕಾಡೆಮಿಯಲ್ಲಿ ನಡೆಯಿತು. ಈ ಸಭೆಯಲ್ಲಿ ಗದಗದಿಂದ ಗಿರಿಜಾ, ರೇಣುಕಾ, ಕೊಪ್ಪಳದಿಂದ



ಶಂಕರ್, ದಕ್ಷಿಣ ಕನ್ನಡದಿಂದ ಸುರೇಖಾ, ಲಿಲ್ಲಿಮೇರಿ, ಧಾರವಾಡದ 16 ಸುಗಮಕಾರರು, ಈ ಸಭೆಯಲ್ಲಿ ಜಿಲ್ಲಾ ಪ್ರತಿನಿಧಿಗಳು ತಮ್ಮ ತಮ್ಮ ಜಿಲ್ಲೆಗಳಲ್ಲಿ ನಡೆದ ಚಟುವಟಿಕೆಗಳನ್ನು ಹಂಚಿಕೊಂಡರು. ತಾವು ನಿರ್ವಹಿಸಿದ ಪ್ರಕರಣಗಳ ಬಗ್ಗೆ ಮತ್ತು ತಾವು ಎದುರಿಸಿದ ಸವಾಲುಗಳ ಬಗ್ಗೆ ಹಂಚಿಕೊಂಡರು ಮತ್ತು ಪ್ರತೀ ತಿಂಗಳು ಸಮುಚ್ಚಯದ ಸಭೆಗಳನ್ನು ನಡೆಸುವುದು, ಹತ್ತು ಮಹಿಳೆಯರ ಪ್ರಕರಣಗಳ ಅಧ್ಯಯನ ಮಾಡುವುದು ಮುಂದಿನ ಯೋಜನೆಗಳಾಗಿ ನಿರ್ಧರಿಸಲಾಗಿದೆ. ಖುಷಿಯವರು ಉಚಿತ ಕಾನೂನು ಸೇವೆಗಳ ಅಧ್ಯಯನದ ರೂಪುರೇಶೆಗಳನ್ನು ಮಂಡನೆ ಮಾಡಿದರು.

## ತಳಮಟ್ಟದ ಮಾಹಿತಿ ಕಾರ್ಯಕ್ರಮಗಳು

### ಬಳ್ಳಾರಿ ಜಿಲ್ಲೆ



ಮೊದಲ ಹಂತದ ಲಿಂಗತ್ವ ತರಬೇತಿ ಪಡೆದ 38 ಸುಗಮಕಾರರು 76 ಲಿಂಗತ್ವ ಮಾಹಿತಿ ಕಾರ್ಯಕ್ರಮಗಳನ್ನು ನಡೆಸಿದ್ದು 1936 ಮಂದಿ ಭಾಗವಹಿಸಿರುತ್ತಾರೆ.

### ಬಾಗಲಕೋಟೆ ಜಿಲ್ಲೆ



ಮೊದಲ ಹಂತದ ಲಿಂಗತ್ವ ತರಬೇತಿ ಪಡೆದ 25 ಸುಗಮಕಾರರು 50 ಲಿಂಗತ್ವ ಮಾಹಿತಿ ಕಾರ್ಯಕ್ರಮಗಳನ್ನು ನಡೆಸಿದ್ದು 583 ಮಂದಿ ಭಾಗವಹಿಸಿರುತ್ತಾರೆ.

## ಪೂರಕ ಕಾನೂನು ಸುಗಮಕಾರರ ಸಮುಚ್ಚಯದ ಚಟುವಟಿಕೆಗಳು

### ದಕ್ಷಿಣ ಕನ್ನಡ

ದಿನಾಂಕ 12-10-2021, 9-11-2021 14-12-2021 ಮತ್ತು 11-01-2022ರಂದು ಸಮುಚ್ಚಯದ ಮಾಸಿಕ ಸಭೆಯು ನಡೆಯಿತು. ಭಾಗವಹಿಸಿದ ಪೂರಕ ಕಾನೂನು ಸುಗಮಕಾರರು ತಾವು ನಿರ್ವಹಿಸಿದ ಪ್ರಕರಣಗಳು, ಪ್ರಕರಣ ನಿರ್ವಹಣೆಯಲ್ಲಿ ಬಂದ ಸವಾಲುಗಳನ್ನು ಹಂಚಿಕೊಂಡರು. ತಿಂಗಳ ಸಭೆಯಲ್ಲಿ ಸದಸ್ಯರು ಒಂದೊಂದು ಹೊಸ ವಿಷಯಗಳ ಬಗ್ಗೆ ಮಂಡನೆ ಮಾಡಲು ನಿರ್ಧರಿಸಿರುತ್ತಾರೆ. 9-11-2021ರ ಸಭೆಯಲ್ಲಿ ರಾಜೇಂದ್ರ ಕೆ.ಪಿ ಯವರು ಸ್ಮಾರ್ಟ್ ಸಿಟಿಯ ಬಗ್ಗೆ ಮಾಹಿತಿ ನೀಡಿರುತ್ತಾರೆ.

ದಿನಾಂಕ 28-12-2021ರಂದು ಉಜಿರೆ ಗ್ರಾಮ ಪಂಚಾಯಿತಿಯಲ್ಲಿ ಸೈಬರ್ ಅಪರಾಧ ಮತ್ತು ಮಕ್ಕಳ ರಕ್ಷಣೆಯ ಬಗ್ಗೆ ಆಶಾಲತಾ ಸುವರ್ಣರವರು ಮಾಹಿತಿ ನೀಡಿದರು. ಈ ಮಾಹಿತಿ ಕಾರ್ಯಕ್ರಮದಲ್ಲಿ ಮಹಿಳೆಯರು, ಆಶಾ ಕಾರ್ಯಕರ್ತೆಯರು, ಮತ್ತು ಗ್ರಾಮಪಂಚಾಯಿತಿಯ ಸದಸ್ಯರು ಸೇರಿ ಒಟ್ಟು 40 ಸದಸ್ಯರು ಭಾಗವಹಿಸಿದ್ದರು. ಸುಳ್ಯದಲ್ಲಿ ದಿನಾಂಕ 18-12-2021, 19-12-2021ರಂದು ಹೊಸ ಸುಗಮಕಾರರಿಗೆ ಲಿಂಗತ್ವ, ಮಹಿಳಾ ಕಾನೂನುಗಳ 2 ದಿನಗಳ ತರಬೇತಿ ನಡೆದಿರುತ್ತದೆ.

### ಚಿತ್ರದುರ್ಗ ಜಿಲ್ಲೆ

ಸಮುಚ್ಚಯದ ಸಭೆಯು ದಿನಾಂಕ 1/09/2021, 25/09/2021, 13/11/2021, ಮತ್ತು 25/12/2021ರಂದು ಒಪ್ಪತ್ತಿನ ಸ್ವಾಮಿ ಮಠದಲ್ಲಿ ನಡೆಯಿತು. ಈ ಸಭೆಗಳಲ್ಲಿ 13 ರಿಂದ 15 ಜನ ಪೂರಕ ಕಾನೂನು ಸುಗಮಕಾರರು ಭಾಗವಹಿಸಿದ್ದರು. ನಿರ್ವಹಿಸಿದ ಮಾಹಿತಿ ಕಾರ್ಯಕ್ರಮಗಳು, ಪ್ರಕರಣಗಳ ಬಗ್ಗೆ ಹಂಚಿಕೊಂಡರು. 25/09/2021ರಂದು ಗೂಗಲ್ ಮೀಟ್ ಮುಖಾಂತರ ಡೀಡ್ಸ್ ಹಮ್ಮಿಕೊಂಡ ಮಹಿಳಾ ಪ್ರಕರಣಗಳ ನಿರ್ವಹಣೆ ತರಬೇತಿಯಲ್ಲಿ 13 ಜನ ಸುಗಮಕಾರರು ಭಾಗವಹಿಸಿರುತ್ತಾರೆ. 14 ಜನ ಸುಗಮಕಾರರು ತಮ್ಮ ತಮ್ಮ ಕ್ಷೇತ್ರದಲ್ಲಿ ಲಿಂಗ-ಲಿಂಗತ್ವ, ಕೌಟುಂಬಿಕ ದೌರ್ಜನ್ಯ, ಬಾಲ್ಯ ವಿವಾಹ, ಪೋಕ್ಸೋ ಬಗ್ಗೆ ಡೀಡ್ಸ್ ವತಿಯಿಂದ ನಡೆದ 24 ತಳಮಟ್ಟದ ಮಾಹಿತಿ ಕಾರ್ಯಕ್ರಮಗಳನ್ನು ನಡೆಸಿರುತ್ತಾರೆ. ತಳಮಟ್ಟದ ಮಾಹಿತಿ ಕಾರ್ಯಕ್ರಮಗಳ ಅನುಭವ ಮತ್ತು ಅಭಿಪ್ರಾಯಗಳನ್ನು 25/12/2021ರ ಸಭೆಯಲ್ಲಿ ಸುಗಮಕಾರರು ಹಂಚಿಕೊಂಡರು.

### ಕೊಪ್ಪಳ ಜಿಲ್ಲೆ

ಸಮುಚ್ಚಯದ ಸಭೆಯು ದಿನಾಂಕ 21/12/2021ರಂದು ನೆಹರೂ ಕ್ರೀಡಾ ಕೇಂದ್ರ ಕೊಪ್ಪಳದಲ್ಲಿ ನಡೆಯಿತು. ಈ ಸಭೆಯಲ್ಲಿ 8 ಜನ ಸುಗಮಕಾರರು ಭಾಗವಹಿಸಿದ್ದರು. KHPT ವತಿಯಿಂದ ನಡೆದ 180 ಮಾಹಿತಿ ಕಾರ್ಯಕ್ರಮಗಳನ್ನು ಸಮುಚ್ಚಯದ ಸದಸ್ಯರು ನಡೆಸಿ, ಒಟ್ಟು 4500 ಪುರುಷರು, ಮಹಿಳೆಯರು, ಹದಿಹರೆಯದ ಮಕ್ಕಳಿಗೆ ಲಿಂಗ-ಲಿಂಗತ್ವ, ಮಹಿಳಾ ದೌರ್ಜನ್ಯ, ಬಾಲ್ಯ ವಿವಾಹ, ಪೋಕ್ಸೋ, ಬಗ್ಗೆ ಮಾಹಿತಿ ನೀಡಿದರು. 10 ಜನ ಸುಗಮಕಾರರು ತಮ್ಮ ತಮ್ಮ ಕ್ಷೇತ್ರದಲ್ಲಿ ಲಿಂಗ-ಲಿಂಗತ್ವ, ಮಹಿಳಾ ದೌರ್ಜನ್ಯ, ಬಾಲ್ಯ ವಿವಾಹ, ಪೋಕ್ಸೋ ಬಗ್ಗೆ ಡೀಡ್ಸ್ ವತಿಯಿಂದ ನಡೆದ 17 ತಳಮಟ್ಟದ ಮಾಹಿತಿ ಕಾರ್ಯಕ್ರಮಗಳನ್ನು ನಡೆಸಿ 450 ಜನಕ್ಕೆ ಕಾನೂನು ಮಾಹಿತಿ ನೀಡಿರುತ್ತಾರೆ. ತಳಮಟ್ಟದ ಮಾಹಿತಿ ಕಾರ್ಯಕ್ರಮಗಳ ಅನುಭವಗಳನ್ನು 21/12/2021ರ ಸಭೆಯಲ್ಲಿ ಸುಗಮಕಾರರು ಹಂಚಿಕೊಂಡರು.

### ಗದಗ ಜಿಲ್ಲೆ

ಸಮುಚ್ಚಯದ ಸಭೆಯು ದಿನಾಂಕ 22/10/2021ರಂದು ಗೂಗಲ್ ಮೀಟ್ ಮೂಲಕ ಮತ್ತು 21/12/2021ರಂದು ಮಹೇಶ್ವರಿ ವಿವಿಧೋದ್ದೇಶಗಳ ಮಹಿಳಾ ಮಂಡಳ ಗದಗದಲ್ಲಿ ನಡೆಯಿತು. 4 ಜನ ಸುಗಮಕಾರರು ತಮ್ಮ ತಮ್ಮ ಕ್ಷೇತ್ರದಲ್ಲಿ ಲಿಂಗ-ಲಿಂಗತ್ವ, ಕೌಟುಂಬಿಕ ದೌರ್ಜನ್ಯ, ಬಾಲ್ಯ ವಿವಾಹ, ಪೋಕ್ಸೋ ಬಗ್ಗೆ ಡೀಡ್ಸ್ ವತಿಯಿಂದ ನಡೆದ 8 ತಳಮಟ್ಟದ ಮಾಹಿತಿ ಕಾರ್ಯಕ್ರಮಗಳನ್ನು ನಡೆಸಿ 120 ರಿಂದ 150 ಜನಕ್ಕೆ ಮಾಹಿತಿ ನೀಡಿರುತ್ತಾರೆ. ತಳಮಟ್ಟದ ಮಾಹಿತಿ ಕಾರ್ಯಕ್ರಮಗಳ ಅನುಭವಗಳನ್ನು 21/12/2021ರ ಸಭೆಯಲ್ಲಿ ಸುಗಮಕಾರರು ಹಂಚಿಕೊಂಡರು.

### ಧಾರವಾಡ ಜಿಲ್ಲೆ

8 ರಿಂದ 10 ಸುಗಮಕಾರರು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸಹಯೋಗದೊಂದಿಗೆ ಸ್ವ ಸಹಾಯ ಸಂಘದ ಮಹಿಳೆಯರಿಗೆ ಮತ್ತು ಪುರುಷರಿಗೆ, ಪ್ರೌಢ ಶಾಲೆ ಮಕ್ಕಳು ಹೀಗೆ ಒಟ್ಟು 1500 ಜನರಿಗೆ ಪೋಕ್ಸೋ, ಕೌಟುಂಬಿಕ ದೌರ್ಜನ್ಯ, ಬಾಲ್ಯ ವಿವಾಹದಂತಹ ಕಾನೂನುಗಳ ಬಗ್ಗೆ ತಳಮಟ್ಟದಲ್ಲಿ ಮಾಹಿತಿ ಕಾರ್ಯಕ್ರಮಗಳನ್ನು ನಡೆಸಿರುತ್ತಾರೆ. ದಿನಾಂಕ 26-11-2021ರಂದು ಸಮುಚ್ಚಯದ ಗೂಗಲ್ ಸಭೆ ನಡೆದಿದ್ದು 10 ಜನ ಸುಗಮಕಾರರು ಭಾಗವಹಿಸಿದ್ದು, 3ನೇ ಹಂತದ ತರಬೇತಿಯ ಅನುಭವ ಹಂಚಿಕೊಂಡರು.


ಮುದ್ರಣ : ಪಿಕ್ಸೆಲ್ಸ್ ಡಿಸೈನರ್ಸ್, ಕುದ್ರೋಳಿ, ಮಂಗಳೂರು

DEEDS SAMVAADA - A news letter by DEEDS, Mangalore



ವಿಳಾಸ : **ಡೆವಲಪ್‌ಮೆಂಟ್ ಎಜುಕೇಶನ್ ಸರ್ವೀಸ್ (ಡೀಡ್ಸ್)**

ಆನಂದ ಅಪಾರ್ಟ್‌ಮೆಂಟ್ಸ್, ಕದ್ರಿ, ಮಂಗಳೂರು, ದ.ಕ. - 575 002. ದೂರವಾಣಿ : 0824-2217022, 4281037

E-mail : deeds82@rediffmail.com Website : www.deedsmangaluru.com